

ಮನೋಜ್ಞ ಲೇಖನ

'ಸ್ಮಾರಕವೂ ಸಂರಕ್ಷಣೆಯೂ', ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ, ಸೆ.17) ಮನೋಜ್ಞವಾಗಿತ್ತು. ಬೇಲೂರು, ಹಳೇಬೀಡು, ಪಟ್ಟದಕಲ್ಲು, ಹಂಪೆಗಳಲ್ಲಿನ ಭವ್ಯ ದೇಗುಲಗಳ ಸಂರಕ್ಷಣೆ ಮಾಡಬೇಕಾದ ಅಗತ್ಯವಿದೆ. ಗತಕಾಲದ ವೈಭವವನ್ನು ವಿಜೃಂಭಿಸಲು ಸರ್ಕಾರ ಇನ್ನಷ್ಟು ಮುಂದಾಗಬೇಕಿದೆ.

–ಎ.ಕೆ. ಪಟ್ಟಾಭಿ, ಬೆಂಗಳೂರು,
ಕೆ. ರಾಮಚಂದ್ರ,ಹೊಸಪೇಟೆ, ರಮೇಶ್ ರಾವ್, ಕೈಕಂಬ

ಕಟುವಾಸ್ತವದ ಅನಾವರಣ

'ಸ್ವರ್ಗದ ಸ್ವಭಾವ', ಕೆ. ಸತ್ಯನಾರಾಯಣ ಅವರ ಕಥೆ ಇಂದಿನ ವ್ಯವಸ್ಥೆಯ ಕಟು ವಾಸ್ತವವನ್ನು ಅನಾವರಣಗೊಳಿಸಿದೆ.

–ಕೊಹಿಮ ಬಸರಕೋಡು

ಜೀವನ ಸತ್ಯ

'ರಾಜಿ' (ಬಿಂಡಿಗನವಿಲೆ ಭಗವಾನ್) ಕಥೆ ಜೀವನ ಸತ್ವವನ್ನು ಬಿಂಬಿಸಿತು.

–ಚೈತ್ರಾ ಕುಕ್ಕೆಮನೆ, ಎಚ್.ಎಸ್. ಶ್ರೀಮತಿ, ಬೆಂಗಳೂರು

ನಿದ್ರಾಪ್ರಿಯರಿಗೆ ಖುಷಿ

'ಹೆಲ್ತ್‌ಪ್ಲಸ್'ನಲ್ಲಿ 'ಮಧ್ಯಾಹ್ನದ ನಿದ್ದೆ ಹೃದಯಸ್ನೇಹಿ' ಎಂದು ತಿಳಿದು ನಿದ್ರಾಪ್ರಿಯರಿಗೆ ಖುಷಿ ಆಗಿದೆ. ಆದರೆ ಕಾಫಿ ಹೆಚ್ಚಾಗಿ ಕುಡಿಯುವುದು ಹೃದ್ರೋಗಕ್ಕೆ ಕಾರಣ ಎಂಬ ಅಂಶ ಕಾಫಿ ಪ್ರಿಯರಿಗೆ ಕಹಿಯಾಗಿ ತೋರಿದೆ.

– ಬಿ.ಎಸ್. ರಮೇಶ್, ಬೆಂಗಳೂರು

ಹಲೋ ಎಂದರೇನು?

'ಎಳೆಯರ ಅಂಗಳ'ದಲ್ಲಿ ತಿಳಿಸಿದಂತೆ 'ಹಲೋ' ಎಂಬ ಶಬ್ದ ಬಂದದ್ದು ಗ್ರಹಾಂ ಬೆಲ್ ನ ಗೆಳತಿ ಮಾರ್ಗರೆಟ್ ಹಲೋ ನಿಂದ ಎಂಬುದಕ್ಕೆ ನಂಬಲರ್ಹ ಪುರಾವೆಗಳಿಲ್ಲ. ಫೋನಿನಲ್ಲಿ ಸಂಭಾಷಣೆ ಪ್ರಾರಂಭಿಸಲು ಗ್ರಹಾಂ ಬೆಲ್ ಬಳಸುತ್ತಿದ್ದದ್ದು ನಾವಿಕರ ಮೆಚ್ಚಿನ 'ಅಹೊಯ್' ಎಂಬ ಶಬ್ದ. ಹಲೋ ಶಬ್ದದ ಉತ್ಪತ್ತಿ ಸ್ಪ್ಯಾನಿಷ್ ಭಾಷೆಯ 'ಹೊಲಾ' ಶಬ್ದದಿಂದ ಬಂದದ್ದು. ಇದನ್ನು ಟೆಲಿಫೋನ್ ಸಂಭಾಷಣೆಯ ಅಂಗವಾಗಿ ಮಾಡಿದ ಕೀರ್ತಿ ಥಾಮಸ್ ಅಲ್ವ ಎಡಿಸನ್ ಗೆ ಸೇರುತ್ತದೆ.

–ಮನೀಷ್ ದೇಸಾಯಿ, ಮುಂಬೈ

ಖುಷಿಯಾಯಿತು

'ಸೀತಾನದಿ ಸೆರಗಲ್ಲಿ ಚಿಣ್ಣರ ಬೆರಗು' (ಕುಂಸಿ ಎಸ್. ರಮೇಶ್) ಓದಿ ಖುಷಿ ಯಾಯಿತು.

–ನೆ.ಲ.ರಾಮಮೂರ್ತಿ, ಬೆಂಗಳೂರು

ಸಮಸ್ಯೆ ಹೆಚ್ಚಾಯಿತು

'ಮದ್ಧೆ ಮೆದುಳು ಸಕ್ರಿಯವಾಗುವುದು ಹೇಗೆ?'(ನಾಗರತ್ನಾ ಗೋವಿಂದನ್ನವರ) ಲೇಖನದಲ್ಲಿ 'ಮಿಡ್ ಬ್ರೈನ್ ಆಕ್ಟಿವೇಷನ್' ತಿಳಿಸಿದಂತೆ ವಾಸ್ತವದಲ್ಲಿ ಈ ಚಿಕಿತ್ಸೆ ಎಲ್ಲರಿಗೂ ಸರಿ ಹೊಂದುವುದಿಲ್ಲ. ನಮ್ಮ ಸ್ನೇಹಿತರೊಬ್ಬರ ಮಗನಿಗೆ ಅದನ್ನು ಮಾಡಿಸಿದ ನಂತರ ಮಾನಸಿಕ ಒತ್ತಡ ಹೆಚ್ಚಿದಂತಾಗಿ ಅತಿಮೂತ್ರ ಸಮಸ್ಯೆ ಉಂಟಾಯಿತು. ಹೆಚ್ಚು ಹೆಚ್ಚು ಟೀವಿ ವೀಕ್ಷಿಸಲು ಶುರು ಮಾಡಿದ. ಮಕ್ಕಳ ವೈದ್ಯರಿಗೆ ತೋರಿಸಿದಾಗ ಅವರು 'ನೀವು ಇದನ್ನು ಮಾಡಿಸಬಾರದಾಗಿತ್ತು' ಎಂದರು. ಲೇಖನದಲ್ಲಿ ಇದರ ಸಾಧಕ–ಬಾಧಕ ಎರಡನ್ನೂ ನಮೂದಿಸಬೇಕಿತ್ತು.

–ಬಿ.ಆಶಾ, ದಾವಣಗೆರೆ

ಮೋಸಕ್ಕೆ ಬಲಿಯಾಗಬೇಡಿ

'ಮದ್ಧೆ ಮೆದುಳು ಸಕ್ರಿಯವಾಗುವುದು ಹೇಗೆ?' ಲೇಖನ ಓದಿ ಅಚ್ಚರಿಯಾಯಿತು. 'ಮಿಡ್ ಬ್ರೈನ್ ಆಕ್ಟಿವೇಷನ್' ಹೆತ್ತವರಿಗೆ ಮಂಕುಬೂದಿ ಎರಚುತ್ತಿದೆ. ರಾತ್ರಿ ಬೆಳಗಾಗುವುದರೊಳಗೆ ತಮ್ಮ ಮಕ್ಕಳು ಹೆಚ್ಚು ಬುದ್ಧಿವಂತ ರೆನಿಸಬೇಕು ಎಂದು ಸಾವಿರಾರು ರೂಪಾಯಿ ಖರ್ಚು ಮಾಡಲು ಸಿದ್ಧರಿರುವ ಹುಚ್ಚು ಮನಸ್ಸಿನ ಪರಿಣಾಮ ಇದು.

ಕಣ್ಣಿಗೆ ಬಟ್ಟೆ ಕಟ್ಟಿ ಓದುವುದು, ಬರೆಯುವುದು, ವಸ್ತುಗಳ ಬಣ್ಣವನ್ನು ಕೈಯ್ಯಲ್ಲಿ ಸ್ಪರ್ಶಿಸಿ ಹೇಳುವುದು–ಇತ್ಯಾದಿ ಜಾದೂ ತಂತ್ರಗಳು. ನಾವು ಜಾದುಗಾರರು ಕಣ್ಣಿಗೆ ವೈದ್ಯರಿಂದ ಪ್ಲಾಸ್ಟರ್ ಬ್ಯಾಂಡೇಜು ಮಾಡಿಸಿಕೊಂಡು ಜನ–ವಾಹನ ನಿಭಿಡ ರಸ್ತೆಯಲ್ಲಿ ಕಾರು, ಸ್ಕೂಟರ್ ಸೈಕಲ್ ಸವಾರಿ ಮಾಡಿದ್ದೇವೆ. ಇದಕ್ಕೆ ಯಾವುದೇ 'ಮಿಡ್ ಬ್ರೈನ್ ಆಕ್ಟಿವೇಷನ್' ಅಗತ್ಯವಿಲ್ಲ. ಹಲವು ತಂತ್ರಗಳನ್ನು ಬಳಸಿ ಮಕ್ಕಳ ಬ್ರೈನ್ ಆಕ್ಟಿವೇಟ್ ಮಾಡಿದ್ದೇವೆ ಎಂದು ಹೆತ್ತವರನ್ನು ನಂಬಿಸಿ ಸಾವಿರಾರು ರೂಪಾಯಿ ಕೀಳುವ ದಗಾಕೋರರ ಬಲೆಗೆ ಬೀಳಬೇಡಿ. ಇಂಥ ತಂತ್ರಜ್ಞಾನ ಬರೀ 'ಫ್ರಾಡ್' ಎಂದು ನಿಮಿಷಾರ್ಧದಲ್ಲಿ ತೋರಿಸಬಲ್ಲೆವು. ಅಂತರ್ಜಾಲದ ಯೂಟ್ಯೂಬ್‌ನಲ್ಲಿಯೂ ಇಂತಹ ಸಾಕಷ್ಟು ವೀಡಿಯೊಗಳಿವೆ. ಹೆತ್ತವರೇ ಇಂತಹ ಮೋಸದ ಜಾಲಕ್ಕೆ ಬಲಿಯಾಗಬೇಡಿ.

–ಜೂನಿಯರ್ ಶಂಕರ್, ಗಿಲಿಗಿಲಿ ಮ್ಯಾಜಿಕ್, ಉಡುಪಿ

ವಂಚನೆಯ ಜಾಲ

ಮಿಡ್‌ಬ್ರೈನ್ ಆಕ್ಟಿವೇಶನ್ ಕುರಿತ ಲೇಖನ ನೋಡಿ ದಿಗ್ಭ್ರಮೆಯಾಯಿತು. 'ಸುಧಾ'ದಂತಹ ವಿಶ್ವಾಸಾರ್ಹ ಪತ್ರಿಕೆಯಲ್ಲಿ ಈ ಲೇಖನ ಪ್ರಕಟವಾಗ ಬಾರದಿತ್ತು.

ಈ ಜಾಲದ ಸ್ಥಾಪಕ ಮಕಾಟೊ ಶಿಚಿದಾ ಬಗ್ಗೆ ಚೀನಾದ ವೆಬ್‌ಸೈಟ್‌ಗಳಲ್ಲಿ ಹಲವು ಅನುಮಾನಗಳನ್ನು ವ್ಯಕ್ತಪಡಿಸಲಾಗಿದೆ. ಕ್ಯಾಲಿಫೋರ್ನಿಯಾದ ನ್ಯೂಪೋರ್ಟ್ ಯೂನಿವರ್ಸಿಟಿಯಿಂದ ಈತ ಪಿಎಚ್‌ಡಿ ಪಡೆದಿದ್ದಾರಂತೆ. ಈ ಯೂನಿವರ್ಸಿಟಿ ಡಿಗ್ರಿ ಸರ್ಟಿಫಿಕೇಟ್‌ಗಳ ಕಾರ್ಖಾನೆ ಎಂದೇ ಹೆಸರು ಪಡೆದಿದೆ. ಬಿಬಿಸಿ ಚೀನಾ ವರದಿಯ ಪ್ರಕಾರ, ಈತ ಪಡೆದ ವಿಶ್ವ ಶಾಂತಿ ಪ್ರಶಸ್ತಿಯೂ ಅಂತರರಾಷ್ಟ್ರೀಯ ವಂಚನೆ ಸಿಂಡಿಕೇಟ್‌ನ ಒಂದು ಭಾಗವೇ ಆಗಿದೆ. ಕೇರಳದ ಪತ್ರಿಕೆಯೊಂದು 2015ರ ಏಪ್ರಿಲ್‌ನಲ್ಲಿ ಮಿಡ್‌ಬ್ರೈನ್ ವಂಚನೆಯ ಕುರಿತು ಮೂರು ಸರಣಿ ವರದಿಗಳನ್ನು ಪ್ರಕಟಿಸಿದ ಬಳಿಕ ಅಲ್ಲಿ ಈ ಸಂಸ್ಥೆಯ ಕಾರ್ಯಾಚರಣೆ ಕುಂಠಿತಗೊಂಡಿದೆ. ಇದರ ವಿರುದ್ಧ ನಾವು ಕರ್ನಾಟಕ, ತಮಿಳುನಾಡು, ಕೇರಳ, ಗೋವಾ, ಪಾಂಡಿಚೇರಿಗಳಲ್ಲಿ ಈಗಾಗಲೇ ಪ್ರಚಾರ ಅಭಿಯಾನ ನಡೆಸಿದ್ದೇವೆ. ಜನರನ್ನು ಈ ವಂಚನೆಯ ಜಾಲಕ್ಕೆ ಸಿಲುಕದಂತೆ ನೋಡಿಕೊಳ್ಳ ಬೇಕಾಗಿದೆ.

–ಡಾ.ನರೇಂದ್ರ ನಾಯಕ್
ಅಧ್ಯಕ್ಷರು, ಅಖಿಲ ಭಾರತ ವಿಚಾರವಾದಿಗಳ ಒಕ್ಕೂಟ

ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ ೬೦೦ ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450